ಶ್ರೀ ಯು. ಭೂಪತಿ.—ಸ್ವಾಮಿ, ಹೊಸಬರಿಗೆ ತಾವು ಅವಕಾಶ ಮಾಡಿಕೊಡಿ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ವರ್ಗಾವಣೆಯ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎನ್ನುವ ಬಗ್ಗೆ ವಿವರಿಸಬೇಕು.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಸ್ವಾಮಿ, ನಮ್ಮ ಅಭಿಪ್ರಾಯವನ್ನಾದರೂ ತಿಳಿಸುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಇಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೊಸಬರು. ಅವರು ಬಹುಶಃ ಕೆ.ಇ.ಬಿ.ಯ ಎಕ್ಸಿಕ್ಯೂಟೀವ್ ಇಂಜಿನಿಯರ್ ಬಗ್ಗೆ ಪ್ರಶ್ನೆ ಕೇಳುತ್ತಿರಬಹುದು. ಆದರೆ ಅದು ಸರ್ಕಾರಿ ಸಂಸ್ಥೆಯಲ್ಲ. ಅದು ಒಂದು ಬೋರ್ಡ್. ಆ ಬಗ್ಗೆ ಪ್ರಶ್ನೆಯನ್ನು ಕೇಳುವುದಕ್ಕೆ ಇಲ್ಲಿ ಬರುವುದಿಲ್ಲ. ಒಂದು ವೇಳೆ ಪ್ರಶ್ನೆ ಕೇಳಿದರೆ ಉತ್ತರ ಯಾರು ಹೇಳುತ್ತಾರೆ ? ಆದ್ದರಿಂದ ಮಾನ್ಯ ಸದಸ್ಯರು ಕೆ.ಇ.ಬಿ.ಯ ರಿಪೋರ್ಟ್ ಚರ್ಚೆಗೆ ಬಂದಾಗ ವಿಷಯ ಪ್ರಸ್ತಾಪ ಮಾಡಲಿ. ಆಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಆದರೆ ಈ ಸಮಯದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಗಡಿ ವಿವಾದ ಬಗ್ಗೆ ಅಧ್ಯಯನ ಸಮಿತಿಯ ವರದಿ

೨೯೮ (೨೮೪) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ-ಮಹಾರಾಷ್ಟ್ರ ಸರ್ಕಾರೀ ಅಧಿಕಾರಿಗಳ ಗಡಿ ಅಧ್ಯಯನ ಸಮಿತಿಯ ವರದಿ ಯನ್ನು ಶಾಸಕರಿಗೆ ಕೊಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಆ) ಕರ್ನಾಟಕ-ಮಹಾರಾಷ್ಟ್ರ ಎರಡೂ ರಾಜ್ಯಗಳ ಅಧಿಕಾರಿಗಳಿಂದ ಸಮಗ್ರ ಅಭಿವೃದ್ಧಿ ಕಾರ್ಯಕ್ಕಾಗಿ ತಯಾರಿಸಿದ ಅಂದಾಜು ಮೊತ್ತವೆಷ್ಟು ?

ಇ) ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಸದನದ ವಿಶ್ವಾಸವನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದು ನಿಜವೇ ?

ಈ) ಗಡಿ ಭಾಗದಲ್ಲಿರುವ ಸರ್ವ ಸಮಾಜದ ವಿದ್ಯಾವಂತ ಪದವೀಧರರ ನೌಕರಿಯ ಬಗ್ಗೆ ಸರ್ಕಾರದಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮವೇನು ?

ಉ) ಕರ್ನಾಟಕ ಮಹಾರಾಷ್ಟ್ರ ವಿವಾದಾತ್ಮಕ ವಿಷಯವನ್ನು ಮೇಲಿಂದ ಮೇಲೆ ಚರ್ಚಿಸು ವುದರಲ್ಲಿ ರಾಜಕೀಯ ಉದ್ದೇಶಕ್ಕೆ ಪ್ರಚೋದನೆ ಸಿಗುತ್ತದೆಯೇ ?

ಊ) ಕರ್ನಾಟಕ ಮಹಾರಾಷ್ಟ್ರ ಸೀಮಾ ಭಾಗದ ಜನರ ಮನಸ್ಸನ್ನು ಅರಿತುಕೊಳ್ಳಲು ಸರ್ಕಾರಿ ಅಧಿಕಾರಿಗಳಿಂದ ಆದಂತಹ ವಿಫಲತೆಯನ್ನು ಸರ್ಕಾರವು ಮನಗೊಂಡಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಕರ್ನಾಟಕ ಮಹಾರಾಷ್ಟ್ರ ಸರ್ಕಾರೀ ಅಧಿಕಾರಿಗಳ ಗಡಿ ಅಧ್ಯಯನ ಸಮಿತಿಯ ವರದಿಗಳು ಸ್ವಭಾವತ ಸರ್ಕಾರಕ್ಕೆ ನೀಡುವ ಅಧಿಕೃತ ಸಲಹೆ (official advise tendered to Govt) ಆದ್ದರಿಂದ ಅವುಗಳನ್ನು ಶಾಸಕರಿಗೆ ಕೊಡುವ ಅವಶ್ಯಕತೆ ಕಂಡು ಬರುವುದಿಲ್ಲ.

ಆ) ಅಭಿವೃದ್ಧಿ ಕಾರ್ಯಗಳ ಬಗ್ಗೆ ಇನ್ನೂ ಶಿಫಾರಸ್ಸುಗಳು ಸಿದ್ಧವಾಗಿಲ್ಲವಾದ್ದರಿಂದ ಈ ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗುವ ಹಣದ ಮೊತ್ತವನ್ನು ಅಂದಾಜು ಮಾಡುವ ಪ್ರಮೇಯ ಬಂದಿಲ್ಲ,

ಇ) ಗಡಿ ಪ್ರದೇಶಗಳಲ್ಲಿನ ಸಮಾಂತರ ಅಭಿವೃದ್ಧಿ ಚಟುವಟಿಕೆಗಳ ಮೌಲ್ಯ ನಿರ್ಣಯ, ಭಾಷಾ ಅಲ್ಪ ಸಂಖ್ಯಾತರಿಗೆ ಉದ್ಯೋಗವಕಾಶ ಪ್ರಾಥಮಿಕ ಶಿಕ್ಷಣಕ್ಕೆ ಸೌಲಭ್ಯಗಳು, ಹಾಗೂ ಪ್ರೌಢ ಶಾಲೆಗಳ ಸ್ಥಾಪನೆ ಮುಂತಾದ ಮುಖ್ಯ ಉದ್ದೇಶಗಳ ಅಧ್ಯಯನಕ್ಕಾಗಿ ಎರಡೂ ರಾಜ್ಯಗಳನ್ನು ಪ್ರತಿನಿಧಿಸುವ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದೆ. ಸದರಿ ವಿಷಯವು ಗಡಿ ವಿವಾದ ಇತ್ಯರ್ಥಕ್ಕೆ ಸಂಬಂಧಿಸದಿರುವುದರಿಂದ ಸದನದ ವಿಶ್ವಾಸ ಪಡೆಯುವ ಪ್ರಮೇಯ ಕಂಡು ಬರಲಿಲ್ಲ.

ಈ) ಈಗಾಗಲೇ ತಿಳಿಸಿರುವಂತೆ ಅಧಿಕಾರಿಗಳ ಸಮಿತಿಯು ಭಾಷಾ ಅಲ್ಪಸಂಖ್ಯಾತರಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಪರಿಶೀಲಿಸುತ್ತಿದೆ. ಸಮಿತಿಯ ಸಲಹೆಯನ್ನು ಪರಿಗಣಿಸಲಾಗುವುದು,

ಉ) ಸರ್ಕಾರವು ಆ ರೀತಿ ಭಾವಿಸುವುದಿಲ್ಲ.

ಊ) ಅಧಿಕಾರಿಗಳ ಸಮಿತಿಯು ತನ್ನ ಪೂರ್ವಭಾವೀ ವರದಿಯಲ್ಲಿ ಅಂಗೀಕರಿಸುವ ನಿಶ್ಚಿತ ಕ್ರಮಗಳ ಬಗ್ಗೆ ಪ್ರಯೋಜನಕಾರಿಯಾದ ಸಲಹೆ ನೀಡಿದೆ.

ಶ್ರೀ ಮಲ್ಲಾರಿಗೌಡ ಶಂಕರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, official advise tendered to Government.........ಎಂದು ಹೇಳಿದರು. ಅದನ್ನು ಸರಕಾರಕ್ಕೆ ಮಾತ್ರ ಕೊಡಬೇಕೆಂದು ಹೇಳಿದರು. ಶಾಸಕರಿಗೆ ಕೊಟ್ಟರೆ ಏನು ತೊಂದರೆ ಇದೆ ? ಇವರಿಗೆ ಕೊಡುವುದಕ್ಕೆ ಏತಕ್ಕೆ ಆಜ್ಞೆ ಮಾಡಲಿಲ್ಲ ? ಇದರಿಂದ ಗಡಿ ಪ್ರದೇಶದಿಂದ ಬರತಕ್ಕ ಶಾಸಕರಾದ ನಮಗೆ ತೊಂದರೆ ಬಂದಿದೆ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ವಿವರವಾದ ವಿಷಯವನ್ನು ಕೇಳುತ್ತೇನೆ. ಈಗ ದಿನನಿತ್ಯ ಪೇಪರ್‌ನಲ್ಲಿ ಗಡಿ ವಿಚಾರ ಬರುತ್ತಿದೆ. ನಾವೂ ಮಹಾಜನ್ ವರದಿ ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತಿದ್ದೇವೆ, ಆದರೆ ಅವರು ಬೇರೆ ಏನೋ ಹೇಳುತ್ತಿದ್ದಾರೆ. ನೀವು ಅಧಿಕಾರಿಗಳ ಸಮಿತಿಯನ್ನು ಮಾಡಿರಬಹುದು ಅಥವಾ ಶಾಸಕರ ಸಮಿತಿಯನ್ನು ಮಾಡಿರಬಹುದು; ಆದರೆ ಈ ಸದನದ ವಿಶ್ವಾಸವನ್ನು ತಾವು ಪಡೆಯದೆ ಸಮಿತಿ ರಚನೆ ಮಾಡಲಿಕ್ಕೆ ಏಕೆ ಕ್ರಮ ತೆಗೆದುಕೊಂಡಿದ್ದೀರಿ; ಇದರ ಬಗ್ಗೆ ತಮ್ಮನ್ನು ತೀವ್ರವಾಗಿ ಖಂಡಿಸಬೇಕಾಗುತ್ತದೆ. ಈ ಸದನದಲ್ಲಿ ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಗಡಿಭಾಗದ ಜನರಿಗೆ ಏನು ತೊಂದರೆಯಾಗುತ್ತಿದೆ ಅದನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಹುದಾಗಿತ್ತು. ಏಕಾಏಕೀ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿ ಏನಾದರೂ ತೀರ್ಮಾನ ತೆಗೆದುಕೊಂಡರೆ, ಆ ಭಾಗದಲ್ಲಿ ಏನಾದರೂ ಗಲಾಟೆ ಆದರೆ ಅದನ್ನು ನಾವು ಅನುಭವಿಸಬೇಕಾಗುತ್ತದೆ. ಇದರ ಬಗ್ಗೆ ತಮ್ಮ ಅನಿಸಿಕೆಗಳನ್ನು ಹೇಳಬೇಕೆಂದು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದು ಕರ್ನಾಟಕಕ್ಕೆ ಸಂಬಂಧಪಟ್ಟಂತಹ, ಗಡಿ ಇತ್ಯರ್ಥಕ್ಕೆ ಸಂಬಂಧಪಟ್ಟಂತಹ ಸಮಿತಿಅಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಗಡಿ ವಿಚಾರವಲ್ಲಿ ಈ ಸದನದ ಒಂದು ತೀರ್ಮಾನ ಇದೆ. ಗಡಿ ವಿಚಾರದಲ್ಲಿ ಏನಾದರೂ ಬದಲಾವಣೆ ಆಗುವುದಾದರೆ, ಅದರ ಬಗ್ಗೆ ವಿಚಾರ ಮಾಡುವುದಾದರೆ, ಈ ಸದನದ ಒಪ್ಪಿಗೆ ಇಲ್ಲದೇ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಈ ಸಮಿತಿಯ ಉದ್ದೇಶ ಏನೆಂದರೆ, ಗಡಿ ಪ್ರದೇಶದಲ್ಲಿ. ನಮ್ಮ ಕಡೆಗೆ ಮತ್ತು ಆ ಕಡೆಗೆ. ಕೆಲವು ಪ್ರದೇಶಗಳು ಇವೆ. ಆ ಪ್ರದೇಶಗಳು ಮಹಾಜನ ಕಮಿಷನ್ ಐತೀರ್ಪಿನ ಪ್ರಕಾರ, ಕೆಲವು ಪ್ರದೇಶಗಳು. ನಮ್ಮಲ್ಲಿಂದ ಆ ಕಡೆಗೆ ಹೋಗಬಹುದು, ಕೆಲವು ಭಾಗ ಆ ಕಡೆಯಿಂದ ನಮಗೆ ಬರಬಹುದು. ಇದು ಮಹಾಜನ್ ಕಮಿಷನ್ ವರದಿಯ ಪ್ರಕಾರ ಹೇಳುತ್ತೇನೆ, ಇದಕ್ಕೆ ಅನೇಕ ವರ್ಷಗಳು ಆಗಬಹುದು. ಈ ಭಾಗದಿಂದ ಈಗ ಅನೇಕ ದೂರುಗಳು ನಮ್ಮ ಹತ್ತಿರ ಬರುತ್ತಿವೆ. ಈ ದೂರುಗಳು ಏನೆಂದರೆ, ಮಹಾರಾಷ್ಟ್ರದಲ್ಲಿರತಕ್ಕಂಥ, ಕನ್ನಡ ಮಾತನಾಡತಕ್ಕಂಥ ಜನರಿರುವ ಪ್ರದೇಶದಿಂದ, ನಮಗೆ ಕನ್ನಡ ಮಿಡಿಯಂ ಇರತಕ್ಕ ಶಾಲೆಗಳನ್ನು ಪ್ರಾರಂಭ ಮಾಡಲಿಕ್ಕೆ ಇಲ್ಲಿ ಅವಕಾಶ ಕೊಡುವುದಿಲ್ಲ, ಹೈಸ್ಕೂಲಿನಲ್ಲಿ ಕನ್ನಡ ಮಾಧ್ಯಮ ಕೊಡುವುದಕ್ಕೆ ಅವರು ಒಪ್ಪುವುದಿಲ್ಲ ಎನ್ನತಕ್ಕ ದೂರುಗಳು

ಇವೆ. ಮಹಾರಾಷ್ಟ್ರ ಸರಕಾರದವರು, ೧೯೭೭ನೇ ಇಸವಿಯಲ್ಲಿ ಒಂದು ಸರ್ಕ್ಯುಲರ್ ಹೊರಡಿಸಿದರು ಅದು ಏನೆಂದರೆ ಇನ್ನು ಮುಂದೆ ಕನ್ನಡ ಸ್ಕೂಲು ಪ್ರಾರಂಭ ಮಾಡುವುದಕ್ಕೆ ಪರವಾನಗಿ ಕೊಡಕೂಡದು ಎಂದು ಒಂದು ಜಿ ಒ ಹೊರಡಿಸಿದ್ದಾರೆ, ಇಂತಹ ದೂರು ನಮ್ಮ ಹತ್ತಿರ ಬಂದಿದೆ, ಇದೇ ರೀತಿ ಅಭಿವೃದ್ಧಿ ಕೆಲಸಗಳ ಬಗ್ಗೆ ಕೂಡಾ ದೂರು ಇರಬಹುದು, ರಸ್ತೆ ವಿಚಾರದಲ್ಲಿ ಆಗಬಹುದು, ಒಟ್ಟಿನಲ್ಲಿ ಪ್ರತಿಯೊಂದು ವಿಚಾರದಲ್ಲೂ ನಮ್ಮನ್ನು ನಿರ್ಲಕ್ಷ್ಯ ಮಾಡಿದ್ದಾರೆ, ಇದರ ಬಗ್ಗೆ ಮಹಾರಾಷ್ಟ್ರ ಸರಕಾರಕ್ಕೆ ಆಸಕ್ತಿ ಇಲ್ಲ, ನಮ್ಮ ಅಭಿವೃದ್ಧಿಯ ಕಡೆಗೆ ಅವರು ನೋಡುವುದಿಲ್ಲ ಎಂದು ಪುನಃ ಪುನಃ ನಮಗೆ ಈ ರೀತಿಯ ಅರ್ಜಿಗಳನ್ನು ಕೊಡುತ್ತಿದ್ದರೆ ಈ ಕಮಿಟಿಯನ್ನು ನಾವು ಮಾಡಿದ್ದು, ಎರಡೂ ರಾಜ್ಯದ ಮುಖ್ಯಮಂತ್ರಿಗಳೂ ಸೇರಿ ಮಾತನಾಡಿದ್ದು ಈ ರೀತಿಯ ದೂರುಗಳು ತೊಂದರೆಗಳು ಏನು ಇದ್ದಾವೆ, ಅವು ಯಾವ ಭಾಗದ ಜನರದ್ದೇ ಆಗಿರಲಿ ಅವುಗಳನ್ನು ನೋಡಬೇಕು. ಆದರೆ ಅವರು ಆ ಕಡೆ ಭಾಗದಲ್ಲಿದ್ದಾರೆ ಎಂದು ಹೇಳತಕ್ಕ ಒಂದು ಕಾರಣದಿಂದ, ಅಭಿವೃದ್ಧಿ ಕಾರ್ಯದಿಂದ ಅವರನ್ನು ವಂಚಿತರನ್ನಾಗಿ ಮಾಡಕೂಡದು, ಹಾಗೆ ಮಾಡಿದರೆ ಅದು ತಪ್ಪು, ಈ ಸರಕಾರ ಮಾಡಿರಲಿ, ಆ ಸರಕಾರ ಮಾಡಿರಲಿ, ಅದು ತಪ್ಪು ಎಂದು ಹೇಳತಕ್ಕ ಉದ್ದೇಶದಿಂದ, ಇದನ್ನು ಅಭ್ಯಾಸ ಮಾಡಬೇಕು; ನಮ್ಮ ಆಫಿಸರ್‌ಗಳು ಅಲ್ಲಿ ಹೋಗಿ ನೋಡಿಕೊಂಡು ಬರಬೇಕು ಅಲ್ಲಿಯ ಆಫೀಸರ್ ಇಲ್ಲಿಗೆ ಬಂದು ನೋಡಲಿ, ನಾವು ಯಾವುದೇ ಕಾರಣದಿಂದಲೂ ಅಭಿವೃದ್ಧಿ ಕೆಲಸಗಳನ್ನು ನಮ್ಮ ಗಡಿಯ ಒಳಗಡೆ ನಿಲ್ಲಿಸಿಲ್ಲ, ಆದರೂ ಸಹ ನಮ್ಮ ಮೇಲೆ ಕೆಲವು ದೂರುಗಳು ಇದ್ದಾವೆ ; ಅದು ಏನೆಂದರೆ ಕೆಲವು ಸರಕಾರಿ ನೋಟಿಫಿಕೇಷನ್‌ಗಳನ್ನು ಮರಾಠಿಯಲ್ಲಿ ಕೊಡಲಿಲ್ಲ ಎಂದು ಹೇಳತಕ್ಕ ದೂರು, ಅಥವಾ ನಮಗೆ ಇಲ್ಲಿ ಮರಾಠಿ ಸ್ಕೂಲುಗಳನ್ನು ಎಷ್ಟು ಸಂಖ್ಯೆಯಲ್ಲಿ ಪ್ರಾರಂಭ ಮಾಡಬೇಕೆಂದು ಇದ್ದೇವೋ ಅಷ್ಟು ಸಂಖ್ಯೆಯಲ್ಲಿ ಕೊಡಲಿಲ್ಲ ಎಂದು ಹೇಳತಕ್ಕ ರೀತಿಯ ದೂರುಗಳು ಇದ್ದಾವೆ, ಇದನ್ನು ನೋಡಲಿಕ್ಕೆ ಈ ಕಮಿಟಿಯನ್ನು ನಾವು ನೇಮಕ ಮಾಡಿದ್ದೇವೆಯೇ ಹೊರತು ಗಡಿಯ ವಿಚಾರದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅಲ್ಲ ಎಂದು ಪುನಃ ಸ್ಪಷ್ಟ ಮಾಡುವುದಕ್ಕೆ ಬಯಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಈ ತರಹದ ನಿಲುವನ್ನು ತಳೆದಿದ್ದರೂ ಸಹ ತಮ್ಮ ಸೌಜನ್ಯವನ್ನು ಶಿವಸೇನೆಯವರು ದುರುಪಯೋಗ ಮಾಡಿಕೊಂಡು ನಿಜವಾಗಿಯೂ ಗಡಿ ಸಮಸ್ಯೆ ಇನ್ನೂ ಜೀವಂತ ಇದೆ ಎಂದು ಹೇಳಲಿಕ್ಕೆ ಹತ್ತಿದ್ದಾರೆ. ಮಹಾರಾಷ್ಟ್ರ ಏಕೀಕರಣ ವಿಷಯದಲ್ಲಿ ಮಹಾಜನ ವರದಿಯ ವಿಷಯ ಹೇಳಿದರೂ ಮಹಾರಾಷ್ಟ್ರದವರೇ, ಆಗ ನಾವು ಅದನ್ನು ವಿರೋಧ ಮಾಡಿದವರು ಕೊನೆಗೆ ಸೌಜನ್ಯಯುತವಾಗಿ ಅದಕ್ಕೆ ಒಪ್ಪಿಕೊಂಡಿದ್ದೆವು. ಇದಕ್ಕೆ ವಿರೋಧ ಇದ್ದರೂ ಕೂಡಾ ಅವರ ಒತ್ತಾಯದ ಮೇಲೆ ಒಪ್ಪಿಕೊಂಡಿದ್ದೆವು. ತಾವು ಈಗಲಾದರೂ ಸಹ ಈ ತರಹ ಸಂದೇಹಕ್ಕೆ ಅವಕಾಶ ಆಗದ ಹಾಗೆ ತಮ್ಮ ನಿಲುವನ್ನು ತಳೆಯುವುದು, ನನಗೆ ಗೊತ್ತಿದೆ ನೀವು ಇದನ್ನು ತ್ಯಾಗ ಮಾಡುವುದಿಲ್ಲ ಎಂದು ಆದರೂ ನಿಮ್ಮ ಸೌಜನ್ಯವನ್ನು ಶಿವಸೇನೆಯಂತಹವರು ದುರುಪಯೋಗ ಮಾಡಿಕೊಳ್ಳುವುದರಿಂದ, ತಾವು ಸರಿಯಾದ ಮಾರ್ಗದರ್ಶನ ಮಾಡುವುದಕ್ಕೆ ನಿಶ್ಚಿತವಾದ ನಿಲುವನ್ನು ತಳೆಯುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕಿಂತ ನಿಶ್ಚಿತವಾದ ನಿಲವು ಯಾವರೀತಿ ತಳೆಯಬೇಕೋ ಗೊತ್ತಿಲ್ಲ. ಅನೇಕ ಸಲ ಹೇಳಿದ್ದೇನೆ, ಗಡಿ ವಿಚಾರದಲ್ಲಿ ಯಾವ ಒಂದು ನಿರ್ಣಯವೂ ಈ ಸದನದ ಮಿತಿಯೊಳಗೇ, ಈ ಮಹಾಜನ್ ನಿರ್ಣಯಕ್ಕೆ ಹೊರಗೆ ಹೋಗತಕ್ಕಂಥ ಅಧಿಕಾರ ನನಗೆ ಇಲ್ಲ, ಆ ಅಧಿಕಾರ ನನಗೆ ಎಲ್ಲಿದೆ, ನಾನು ಹೇಗೆ ಹೊರಗಡೆ ಹೋಗಲಿ, ಯಾವ ಅಧಿಕಾರದಿಂದ ಹೋಗಲಿ, ಯಾವ ಸ್ಯಾಂಕ್ಷನ್ ನನಗೆ ಇದೆ. ಸದನ ತೀರ್ಮಾನ ಮಾಡಿದೆ. ಕಮಿಟಿ ಮಾಡುವುದರಿಂದ ಎರಡು ಮೂರು ಸಲ ಭೇಟಿಯಾದೆ, ಇದು ಅಪರಾಧ ಎಂದು ನಾನು ತಿಳಿಯುವುದಿಲ್ಲ, ಪಕ್ಕದ ರಾಜ್ಯದ ಮುಖ್ಯಮಂತ್ರಿಗಳ ಜೊತೆ, ಅಲ್ಲಿಯ ಜನರ ಸಮಸ್ಯೆಯ ವಿಚಾರದಲ್ಲೂ ಭೇಟಿಯಾಗಬಹುದು, ಬೇರೆ ವಿಚಾರದಲ್ಲಿ ಭೇಟಿಯಾಗಬಹುದು, ನೆರೆಹೊರೆಯ ಮುಖ್ಯಮಂತ್ರಿಗಳ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳಬೇಕು, ಜಗಳ ಆಡತಕ್ಕಂಥಾದ್ದು ಏನಿದೆ, ಗಡಿ ವಿಚಾರದಲ್ಲಾಗಲೀ, ಬೇರೆ ವಿಚಾರದಲ್ಲಾಗಲೀ ಮತಭೇಧ ಇರಬಹುದು, ಅರ್ಥ ಏನು ನಾವು ತಿಳಿದುಕೊಂಡಿದ್ದೇವೆ, ಮಹಾಜನ್ ಕಮಿಷನ್ ನಮ್ಮ ಒಪ್ಪಿಗೆ ಇಲ್ಲದೇ, ಅವರ ಬಿನ್ನಹದ ಮೇಲೆ, ಒತ್ತಾಯದ ಮೇಲೆ, ಮಹಾಜನ್ ಕಮಿಷನ್ ನೇಮಕ ಆಯಿತು. ಯಾವ ನಿರ್ಣಯ ಕೊಡುತ್ತಾರೆ ಅದಕ್ಕೆ ಬದ್ಧರಾಗಿದ್ದೇವೆ ಅವರು ಹೇಳಿದ್ದಾರೆ. ಶ್ರೀಮಾನ್ ದಿವಂಗತ ಚವಾಣ್‌ರವರು, ನನ್ನ ಕೈಯನ್ನು ಕೈಹಿಡಿದು ಹೇಳಿದರು, ಇದೊಂದು ಸಲ ಒಪ್ಪಿಕೊಂಡು

ಬಿಡಿ ಎಂದು ನಾನು ಅವರ ಹತ್ತಿರ ಕೇಳಿದೆ, ಹಿಂದೆ ಇದೇ ತರಹ ತೀರ್ಮಾನಗಳು ಆಗಿವೆ, ಎಲ್ಲಿಯ ವರೆಗೆ ನಿಮಗೆ ಅನುಕೂಲ ಆಗುವುದಿಲ್ಲ. ಅಲ್ಲಿಯವರೆಗೆ ನೀವು ಒಪ್ಪಿಕೊಳ್ಳುವುದಿಲ್ಲ, ಈ ಕಮಿಷನ್ ನಾವು ಒಪ್ಪಿಕೊಂಡರೂ ಕೂಡಾ, ಇವರು ಏನು ತೀರ್ಮಾನ ಕೊಡುತ್ತಾರೆ, ಅದಕ್ಕೆ ನೀವು ಬದ್ಧರಾಗುತ್ತೀರಿ ಎಂದು ಏನು ಗ್ಯಾರಂಟಿ ಎಂದು ಕೇಳಿದರೆ. ಅವರು ಇಲ್ಲ ನಾನು ಮಾತು ಕೊಡುತ್ತೇನೆ. ಈ ಕಮಿಷನ್‌ನಿಂದ ಯಾವುದೇ ತರಹದ ತೀರ್ಮಾನ ಬಂದರೂ ಅದಕ್ಕೆ ಬೈಂಡಿಂಗ್ ಆಗುತ್ತೇವೆ ಎಂದರು, ಈ ಮಾತನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಗೊತ್ತುವಳಿಯಲ್ಲಿ ಸೇರಿಸಲಾಗಿದೆ.

The Commission's Award will be binding on all the parties, Karnataka, Maharashtra, Kerala and the Central Government. ಆದುದರಿಂದ ಇದರ ಬಗ್ಗೆ ನಾವು ಪುನಃ ಪುನಃ ಹೇಳಬೇಕಾದುದಿಲ್ಲ. ನಾನು ದಿಲ್ಲಿಗೆ ಹೋಗಿದ್ದಾಗ ಅಲ್ಲಿ ಪತ್ರಕರ್ತರು, ಮಹಾರಾಷ್ಟ್ರದವರು ದಿಲ್ಲಿಗೆ ಹೋಗಿದ್ದಾರೆ, ಅವರ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳಿದರು. ನಾನು ಏನೂ ಹೇಳುವುದಿಲ್ಲ ಎಂದು ಹೇಳಿದೆ. ಏನು ಹೇಳಬೇಕು, ಅವರು ಹೋಗಿಯೇ ಹೋಗುತ್ತಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯಲ್ಲೂ ಎರಡು ಭಾಗ ಆಗಿದೆ. ಒಂದು ಭಾಗದವರು ಇದನ್ನು ಈ ರೀತಿಯಲ್ಲಿ ನಡೆಸಿಕೊಂಡು ಹೋಗುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತಾರೆ. ಆದರೂ ಕೆಲವು ಜನ ಮಾಡುತ್ತಾರೆ, ಅವರು ಮಾಡಿದರೆ, ನಾವು ಏನು ಮಾಡುವುದಕ್ಕೆ ಬರುತ್ತದೆ ? ಒಂದು ವಿಚಾರ ನಾನು ಮಾನ್ಯ ಪಾಟೀಲರಿಗೆ ಹೇಳುತ್ತೇನೆ, ನಾವು ಭೇಟಿಯಾದುದರಿಂದ ಏನು ಆಯಿತು ಎಂದರೆ, ಮಹಾರಾಷ್ಟ್ರ ಗಡಿ ಒಳಗೆ ಇರತಕ್ಕಂಥ ಕನ್ನಡಿಗರಿಗೆ ಒಂದು ಅನುಕೂಲ ಆಯಿತು. ೧೯೭೬ನೇ ಇಸವಿಯಲ್ಲಿ ಮಹಾರಾಷ್ಟ್ರ ಸರಕಾರ ಏನು ನೋಟಿಫಿಕೇಷನ್ ಹೊರಡಿಸಿತ್ತು, ಅದನ್ನು ವಾಪಸ್ ತೆಗೆದುಕೊಂಡರು, ಇದರಿಂದ ಅನುಕೂಲ ಆಗಲಿಲ್ಲವೇ ? ನಮಗೆ ಭೇಟಿ ಆಗಕೂಡದು ಎಂದು ಹೇಳಿದರೆ, ಇದು ನನಗಂತೂ ಸರಿ ಕಾಣುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಹಾಜನ್ ಕಮಿಷನ್ ನೀವು ಹೇಳಿದ್ದು, ನೀವು ಹೇಳಿದಂಥ ವರದಿಯನ್ನು ಒಪ್ಪದಿದ್ದರೆ ಈಗಿರುವಂಥ ಸ್ಟೇಟಸ್‌ಕೋ ಮೈಂಟೇನ್ ಮಾಡಬೇಕೆಂದು ತಾವು ಕ್ಲಿಯರ್ ಆಗಿ ತಿಳಿಸಿದ್ದರೆ ಅನುಕೂಲವಾಗುತ್ತಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಅಗ್ರಹ ಏನು, ಅಸೆಂಬ್ಲಿಯಲ್ಲಿ ಏನಾಗಿದೆ. ಮಾನ್ಯ ಪಾಟೀಲರು ದಯವಿಟ್ಟು ಮರೆಯಕೂಡದು. ಅಸೆಂಬ್ಲಿಯಲ್ಲಿ ಏನಾಗಿದೆ ಎಂದರೆ, ಮಹಾಜನ್ ಕಮಿಷನ್ ಅವಾರ್ಡನ್ನು ಜಾರಿಯಲ್ಲಿ ತರದೇ ಇದ್ದರೆ ಸ್ಟೇಟಸ್‌ಕೋ ಮೈಂಟೇನ್ ಮಾಡಬೇಕೆಂದು ಆಗಲಿಲ್ಲ. ಮಹಾಜನ್ ಕಮಿಷನ್ ವರದಿಯನ್ನು ಜಾರಿಗೆ ತರಬೇಕು, ಇದು ಈ ಮನೆಯ ಅಗ್ರಹ, ಇದಕ್ಕೆ ಹೊರಗೆ ನಾನು ಹೇಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಆಗಿರತಕ್ಕಂಥ ನಿರ್ಣಯ, ಅದು ಸರಿ. ಮಹಾಜನ್ ಆಯೋಗದ ವರದಿಯಲ್ಲಿ ಯಾವ ಯಾವ ಶಿಫಾರಸುಗಳನ್ನು ಅವರು ಏನು ಮಾಡಿದ್ದಾರೆ, ಆದರಿಂದಾಗಿ ಕೆಲವು ಭಾಗ ನಮ್ಮಿಂದ ಅವರಿಗೆ ಹೋಗಬಹುದು, ಅವರ ಭಾಗ ನಮ್ಮ ಕಡೆಗೆ ಬರಬಹುದು, ಈ ವಿಚಾರದಲ್ಲಿ ಮಹಾಜನ್ ವರದಿಯ ಪ್ರಕಾರವೇ ಮಾಡಬೇಕೆಂದು, ನಿರ್ಣಯದ ಮುಖಾಂತರ ನಾವು ಮಾಡಿರತಕ್ಕ ಅಗ್ರಹ. ಕರ್ನಾಟಕದ ಪರವಾಗಿ ನಮ್ಮ ನಿಲುವನ್ನು ಏನು ಸ್ಪಷ್ಟಪಡಿಸಿದ್ದೇವೆ ಅದನ್ನು ನಾವು ಪ್ರತಿಪಾದನೆ ಮಾಡುತ್ತಿದ್ದೇವೆ.

ಪದೇ ಪದೇ ಇತ್ತೀಚಿನ ಪತ್ರಿಕೆಗಳ ವರದಿಗಳ ಪ್ರಕಾರ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮಹಾರಾಷ್ಟ್ರ ಮುಖ್ಯಮಂತ್ರಿಗಳಾದ ಶಿವಾಜಿರಾವ್ ನೀಲಂಗೇಕರ್ ಅವರನ್ನು ಭೇಟಿ ಮಾಡಿದಾಗ, ಈ ವಿಚಾರ ಮಹಾರಾಷ್ಟ್ರ ಶಾಸನ ಸಭೆಯಲ್ಲೂ ಪ್ರಸ್ತಾಪಕ್ಕೆ ಬಂತು. ಪ್ರತ್ಯೇಕವಾಗಿ ಎಂ.ಇ.ಎಸ್. ನವರು ಕಂಡಾಗ, ನಾಯಕತ್ವ ವಹಿಸಿ, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಮಹಾಜನ್ ಆಯೋಗದ ವರದಿಯ ಶಿಫಾರಸ್ಸಿಗೆ ಎಂ.ಇ.ಎಸ್.ನವರ ನಿಲುವು ವಿರುದ್ಧವಾಗಿದೆ. ನೀವು ನಾಯಕತ್ವ ವಹಿಸುತ್ತೀರಿ ಎಂದು ಅವರ ಬಗ್ಗೆ ಹೇಳತಕ್ಕಂಥ ಹಕ್ಕು ಇವರಿಗೆ ಇಲ್ಲ. ಈ ರೀತಿ ಕೊಡುವುದರಿಂದ ಇನ್ನೂ ಸಮಸ್ಯೆ ಜಟಿಲವಾಗುವುದಕ್ಕೆ ದಾರಿಯಾಗುತ್ತದೆಯೆ ವಿನಹ ಇದು ಸಹಕಾರಿ ಆಗುವುದಿಲ್ಲ ಎನ್ನುವುದು ಅಂಶ. ತಮ್ಮ ತಪ್ಪನ್ನು ಕಂಡು ಹಿಡಿಯುವ ಉದ್ದೇಶ ನನಗೆ ಇಲ್ಲ. ನನಗೆ ಬೆಳಗಾಂನಿಂದ ಫೋನ್‌ಗಳು ಬಂದಿವೆ, ಅಲ್ಲಿ "ಸಕಾಲ್" ಎನ್ನತಕ್ಕ ಮರಾಠಿ ಪತ್ರಿಕೆಯವರು ತಮ್ಮನ್ನು ಪ್ರಶ್ನೆ ಮಾಡಿದಾಗ ಈ ವಿಚಾರದ ಬಗ್ಗೆ ನಾನು ಹೇಳತಕ್ಕಂತಾದ್ದು ಏನೂ ಇಲ್ಲ. ಅಂದರೆ ನಮ್ಮ ಶಾಸನ ಸಭೆಯಲ್ಲಿ ನಾವು ಏನು ನಿರ್ಣಯ ತೆಗೆದು

ಕೊಂಡಿದ್ದೇವೆ, ಮಹಾಜನ್ ಆಯೋಗದ ವರದಿ ಶಿಫಾರಸ್ಸಿನ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ, ಇದರ ಪ್ರಸ್ತಾಪ ಮಾಡದೇ ಇದರ ಬಗ್ಗೆ ನಾನು ಏನೂ ಹೇಳುವುದಿಲ್ಲ. 'There is no dispute almost' ಎನ್ನತಕ್ಕ ಭಾವನೆ ತಾವು ಹೇಳಿದ್ದೀರಿ ಎನ್ನುವುದನ್ನು ಪತ್ರಿಕೆಯಲ್ಲಿ ಬರೆದು ಕೊಂಡಿದ್ದಾರಂತೆ. ಪತ್ರಿಕೆಯವರು ಆ ರೀತಿ ಭಾವನೆ ಪಟ್ಟರೋ ಏನೋ ಗೊತ್ತಿಲ್ಲ. ನನಗೆ ಮರಾಠಿ ಪತ್ರಿಕೆ ಓದುವುದು ಬರುವುದಿಲ್ಲ. ಮಹಾರಾಷ್ಟ್ರದಲ್ಲಿ "ಸಕಾಲ್" ಪತ್ರಿಕೆ ಬಹಳ ದೊಡ್ಡದಾಗಿ ಪ್ರಸಾರವಾಗುತ್ತಿದೆ ಎನ್ನುವುದನ್ನು ಕೇಳಿದ್ದೇನೆ. ಇದು ಅವರಿಗೆ ಇನ್ನೂ ಕೂಡ ಹುರುಪು ಕೊಡುತ್ತದೆ, ಪ್ರಧಾನ ಮಂತ್ರಿಗಳನ್ನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಕಾಣಲು ಹೋಗುತ್ತಿದ್ದಾರೆಂದು ಶ್ರೀಮಾನ್ ಮಲ್ಲಾರಿಗೌಡ ಪಾಟೀಲರು ಪ್ರಶ್ನೆ ಮಾಡಿದ್ದಕ್ಕೆ ನಾನು ಇದನ್ನು ಈಗಲೇ ಹೇಳಬೇಕಾಗಿ ಬಂತು. ಸಕಾಲ್ ಪತ್ರಿಕೆಯಲ್ಲಿ ಬಂದ ಅಭಿಪ್ರಾಯ ಏನಿದೆ, ಅದು ಸರಿಯೋ, ತಪ್ಪೋ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇನ್ನೂ ಏನು ಉತ್ತರ ಕೊಡಬೇಕೋ ಗೊತ್ತಿಲ್ಲ. ಡೆಲ್ಲಿಯಲ್ಲಿ ಮೊನ್ನೆಯ ದಿವಸ ನಮ್ಮ ಮಾನ್ಯ ಶಂಕರಾನಂದ ಮತ್ತು ಅರುಣ್ ನೆಹರು ಅವರನ್ನು ಭೇಟಿ ಮಾಡಿದಾಗ, ಅಲ್ಲಿ ನೋಡಲು ಪತ್ರಿಕೆಯವರು ಬಂದಿದ್ದರು. ಅವರು ಸಕಾಲ್ ಪತ್ರಿಕೆಯವರು ಇರಬಹುದು ಅಥವಾ ಬೇರೆಯವರು ಇರಬಹುದು. ಅದು ನನಗೆ ಗೊತ್ತಿಲ್ಲ. ಮಹಾರಾಷ್ಟ್ರದಿಂದ ಕೆಲವು ಜನ ಬಂದಿದ್ದರು. ಪ್ರಧಾನ ಮಂತ್ರಿಗಳನ್ನು ನೋಡುವುದರ ಬಗ್ಗೆ ನಿಮ್ಮ ಹೇಳಿಕೆ ಏನು ಎಂದು ಕೇಳಿದರು. ಅದಕ್ಕೆ ನಾನು ಏನು ಉತ್ತರ ಕೊಡಬೇಕು ? ಅನಾವಶ್ಯಕವಾಗಿ ಉತ್ತರ ಕೊಡುವ ಅಗತ್ಯ ಇಲ್ಲ. ಮಹಾರಾಷ್ಟ್ರದವರು ಕಳುಹಿಸಿದ್ದಾರೆ. ಅಲ್ಲದೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಇದು ಮೊದಲ ಸಲ ಭೇಟಿ ಮಾಡುತ್ತಿರುವದೇನೂ ಅಲ್ಲ. ಅಲ್ಲಿ ಹೊಸ ಮುಖ್ಯಮಂತ್ರಿಗಳು ಬಂದಾಗ ಹೋಗುತ್ತಿರುತ್ತಾರೆ. ಹಿಂದಿನ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ. ಒಂದು ಸಲ ಅಲ್ಲ, ಎರಡು ಸಲ, ಮೂರು ಸಲ ಹೀಗೆ ಹತ್ತು ಸಲ ಹೋಗಿದ್ದಾರೆ. ನಾವೂ ಕೂಡ ಹೋಗಬೇಕಾದಾಗ ಹೋಗಿದ್ದೇವೆ. ಆದರೆ ಇವತ್ತು ನಾವು ಹೋಗಬೇಕಾದ ಅಗತ್ಯ ಇಲ್ಲವೆಂದು ನನಗನಿಸುತ್ತದೆ.

(ಗೊಂದಲ)

ಅಧ್ಯಕ್ಷರು.—ಸಾಕು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎರಡು ರಾಜ್ಯ ಸರ್ಕಾರಗಳ ಬಗ್ಗೆ ಅಧ್ಯಯನ ಸಮಿತಿಯ ರಿಪೋರ್ಟ್ ಏನು ಬಂದಿದೆ, ಅದನ್ನು ಶಾಸಕರಿಗೆ ಕೊಡಲಿಕ್ಕೆ ಮುಖ್ಯಮಂತ್ರಿಗಳು ಹಿಂದು ಮುಂದು ನೋಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಕಾರಣ ಏನು ಎಂದರೆ, ಇದು ನಾವು ಎರಡು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಮಾಡಿಕೊಂಡಿರುವ ತೀರ್ಮಾನ. ಮುಂದಿನ ಸಭೆಯಲ್ಲಿ ಈ ವರದಿಯನ್ನು ಕೊಡಬಹುದು. ಅವರ ಒಪ್ಪಿಗೆ ಇಲ್ಲದೆ ಕೊಡುವುದಕ್ಕಾಗುವುದಿಲ್ಲ. ನನ್ನ ಒಪ್ಪಿಗೆ ಇಲ್ಲದೆ ಅವರು ಕೊಡುವುದಕ್ಕಾಗುವುದಿಲ್ಲ. ಇದು ಒಂದು ಕಾರಣ. ಎರಡನೇ ಕಾರಣ, ಈ ವಿಚಾರದಲ್ಲಿ ಇನ್ನೂ ಅಂತಿಮವಾಗಿ ವರದಿ ತಯಾರಾಗಿಲ್ಲ. ನಾವು ತಾತ್ಕಾಲಿಕವಾಗಿ ಇಂತಿಂಥ ಕೆಲಸ ಆಗಬೇಕು, ಎಂದು ಇಲ್ಲಿಯ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಸ್ಕೂಲುಗಳನ್ನು ಪ್ರಾರಂಭ ಮಾಡಿದ್ದಾರೆ. ಅದೇರೀತಿ ಅವರೂ ಕೂಡ ತಿಳಿಸಿದ್ದಾರೆ. ಪೂರಾ ವರದಿ ತಯಾರಾಗಿಲ್ಲ. ಅವರ ಜೊತೆ ಚರ್ಚೆ ಮಾಡಿದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಎಸ್. ರಾಣೆ.—ಮಾನ್ಯ ಮುಖ್ಯಮಂತ್ರಿಗಳು ನಾಲ್ಕನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಗಡಿ ಭಾಗದಲ್ಲಿ ಇರುವ ಪದವೀಧರ ನೌಕರರ ಬಗ್ಗೆ ಭಾಷಾ ಅಲ್ಪಸಂಖ್ಯಾತರ ಉದ್ಯೋಗದ ಬಗ್ಗೆ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಗಡಿ ಭಾಗದಲ್ಲಿರತಕ್ಕಂಥ ಭಾಷಾ ಅಲ್ಪಸಂಖ್ಯಾತರು ಅದರಲ್ಲೂ ವಿಶೇಷವಾಗಿ ಕೊಂಕಣಿ ಮಾತನಾಡುವವರಿಗೆ ರಾಜ್ಯಸರ್ಕಾರ ಉದ್ಯೋಗದಲ್ಲಿ ತುಂಬಾ ಅನ್ಯಾಯ ಮಾಡಿದೆ ಎಂಬುದನ್ನು ಗಮನಕ್ಕೆ ತರುತ್ತಿದ್ದೇನೆ. ಅಲ್ಪ ಸಂಖ್ಯಾತರ ಬಗ್ಗೆ ಸರ್ಕಾರದ ವಿರೋಧಿ ನೀತಿಯಿಂದ, ಗಡಿ ಭಾಗದಲ್ಲಿ ಗಡಿ ಸಮಸ್ಯೆ ಬಗ್ಗೆ ಪ್ರಚೋದನೆ ಹೆಚ್ಚಾಗುತ್ತದೆ. ಗಡಿ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಅಲ್ಲಿ ವಾಸಿಸುತ್ತಿರುವ ನಿರುದ್ಯೋಗಿ ಯುವಕರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಮಾಡಿಕೊಡಬೇಕು. ಗಡಿ ಭಾಗದಲ್ಲಿರತಕ್ಕ ಕೊಂಕಣಿ

ಅಥವಾ ಮರಾಠಿ ಭಾಷೆಯನ್ನು ಮಾತನಾಡುವವರಿಗೆ ಶಾಲೆಗಳನ್ನು ತೆರೆಯಬೇಕೆಂದು ಪ್ರಾರ್ಥಿಸುತ್ತೇನೆ. ಈಗಾಗಲೇ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವಾಗ ಸೂಪಾದಲ್ಲಿ ೨–೩ ಮರಾಠಿ ಶಾಲೆಗಳಲ್ಲಿ ಶಿಕ್ಷಕರು ಇಲ್ಲದೆ ಮುಚ್ಚಿದ್ದಾರೆಂದು ಹೇಳಿದ್ದೇನೆ. ಅಲ್ಲಿಗೆ ಶಿಕ್ಷಕರನ್ನು ಹಾಕುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಈ ಗಡಿ ಸಮಸ್ಯೆ ಬಗ್ಗೆ ಮಹಾಜನ್ ವರದಿಯ ನಿರ್ಣಯ ಅಂತಿಮವಾದುದು ಎನ್ನುವುದನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ನಮ್ಮ ಮುಖ್ಯಮಂತ್ರಿಗಳು ಮೇಲಿಂದ ಮೇಲೆ ಇದರ ಬಗ್ಗೆ ಚರ್ಚೆ ಮಾಡುವುದರಿಂದ ಗಡಿ ಭಾಗದಲ್ಲಿರತಕ್ಕ ಜನರಲ್ಲಿ ಒಂದು ತರಹದ ಪ್ರಚೋದನೆ ಉಂಟಾಗುತ್ತದೆ. ಅವರು ತಮ್ಮ ರಾಜಕೀಯ ಉದ್ದೇಶ ಸಾಧನೆಗಾಗಿ ಈ ರೀತಿ ಚರ್ಚೆ ಮಾಡುತ್ತಾರೆ ಎನ್ನುವ ಭಾವನೆ ಬಂದಿದೆ. ವಿಶೇಷವಾಗಿ ಕಾರವಾರ ಮತ್ತು ಸೂಪಾ ಬಗ್ಗೆ, ಜನತಾ ಸರ್ಕಾರ ಕರ್ನಾಟಕದಲ್ಲಿ ಆಳ್ವಿಕೆಗೆ ಬಂದನಂತರ ಅಲ್ಲಿ......

ಅಧ್ಯಕ್ಷರು.—ನೇರವಾದ ಪ್ರಶ್ನೆ ಕೇಳಿ.

ಶ್ರೀ ಪಿ.ಎಸ್. ರಾಣೆ.—ಜನತಾ ಸರ್ಕಾರದ ನೀತಿಯಿಂದ ಗಡಿ ಸಮಸ್ಯೆ ಮತ್ತೆ ಹೆಚ್ಚು ಕೆದಕುತ್ತದೆ. ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ಸರ್ಕಾರ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏನು ಸ್ಪಷ್ಟವಾಗಿ ಹೇಳಬೇಕೋ ನನಗೆ ಗೊತ್ತಿಲ್ಲ. ಶ್ರೀಮಾನ್ ರಾಣೆಯವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯಿಂದ ಮೊದಲು ಎಷ್ಟು ಸಂಖ್ಯೆ ಆರಿಸಿ ಬರುತ್ತಿದ್ದರೋ ಈಗ ಅಷ್ಟು ಸಂಖ್ಯೆಯಲ್ಲಿ ಸದಸ್ಯರು ಸದನಕ್ಕೆ ಬರುತ್ತಿಲ್ಲ. ಇದು ಒಂದು. ಈಗ ಕಾರವಾರ ಅವರ ಸ್ವಂತ ಮತದಾನ ಕ್ಷೇತ್ರ. ಅನೇಕ ಸಲ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆರಿಸಿ ಬಂದಿದ್ದರು. ಈಗ ಎರಡು ಸಲ ಇವರು ಆರಿಸಿ ಬಂದಿದ್ದಾರೆ. ಬಾಗೇವಾಡಿ ಕ್ಷೇತ್ರದಲ್ಲಿ ಪ್ರತಿ ಸಲ ೨–೩ ಜನ ಕನ್ನಡಿಗರು ನಿಲ್ಲುತ್ತಾರೆ. ಆಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆರಿಸಿ ಬಂದಿದ್ದರು. ಆದರೆ ಈ ಸಲ ಕನ್ನಡಿಗರು ಆರಿಸಿ ಬಂದಿದ್ದಾರೆ. ಬೆಳಗಾಂ ಲೋಕಸಭಾ ಚುನಾವಣೆಯಲ್ಲಿ, ಬೆಳಗಾಂ ಸಿಟಿ ಕ್ಷೇತ್ರದಲ್ಲಿ ಕನ್ನಡ ಅಭ್ಯರ್ಥಿಗೆ ಬಹುಮತ ಸಿಕ್ಕಿದೆ. ಇದೆಲ್ಲಾ ಏನು ತೋರಿಸುತ್ತದೆ. ಸಾಮಾನ್ಯ ಜನರಿಗೆ ಇದು ಬೇಕಾಗಿಲ್ಲ, ಆದರೆ ಇವರಿಗೆ ಬೇಕು. ಅಭಿರುಚಿ ಇವರಿಗೆ ಬೇಕು. ತಮ್ಮ ದೈನಂದಿನ ಸಮಸ್ಯೆಗೆ ಪರಿಹಾರಕ್ಕೆ ಕೆಲವು ಜನ ಇದರಲ್ಲಿ ಆಸಕ್ತಿ ಹೊಂದಿದ್ದಾರೆ. ಇದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯ ಶಿರ್ವಾದ ಆರಕ್ಷಕ ಠಾಣಾಧಿಕಾರಿಯವರ ವರ್ಗಾವಣೆ

೨೫೫ (೭೫೧) ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಗೃಹ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ತಾ. ೨–೬–೮೫ ರಿಂದ ೨೮–೬–೮೫ರವರೆಗೆ ದಕ್ಷಿಣ ಕನ್ನಡ ಜಿಲ್ಲೆ ಶಿರ್ವಾ ಆರಕ್ಷಕ ಠಾಣಾಧಿಕಾರಿಯವರನ್ನು ಎಷ್ಟು ಬಾರಿ ವರ್ಗಾವಣೆ ಮಾಡಲಾಯಿತು ಮತ್ತು ಎಷ್ಟು ಬಾರಿ ವರ್ಗಾವಣೆ ರದ್ದು ಮಾಡಲಾಯಿತು ಹಾಗೂ ಆ ರೀತಿಯ ವರ್ಗಾವಣೆಗೆ ಕಾರಣವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).

ಆರಕ್ಷಕ ಉಪ ನಿರೀಕ್ಷಕ ಶ್ರೀ ಎಸ್. ಜಿ. ಮರಿಯಪ್ಪನವರನ್ನು ಶಿರ್ವಾ ಪೋಲೀಸ್ ಠಾಣೆಯಿಂದ ಚಿಕ್ಕಮಗಳೂರು ಜಿಲ್ಲೆಗೆ ದಿನಾಂಕ ೮–೬–೮೫ರಂದು ಪಶ್ಚಿಮ ವಲಯದ ಆರಕ್ಷಕ ಉಪ ಮಹಾ ನಿರೀಕ್ಷಕರು ವರ್ಗಾವಣೆ ಮಾಡಿರುತ್ತಾರೆ. ಈಗ ಅವರು ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ವರ್ಗಾವಣೆಗೆ ಸಾರ್ವಜನಿಕ ಹಿತ ದೃಷ್ಟಿಯೇ ಕಾರಣ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಈ ಅವಧಿಯಲ್ಲಿ ಎಷ್ಟು ಬಾರಿ ಟ್ರಾನ್ಸ್‌ಫರ್ ಆಗಿದೆ, ಎಷ್ಟು ಬಾರಿ ಟ್ರಾನ್ಸ್‌ಫರ್ ರದ್ದತಿ ಆಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಮಂತ್ರಿಯವರು ಈ ರೀತಿ ಉತ್ತರ ಕೊಟ್ಟಿದ್ದಾರೆ, ೮–೬–೮೫ನೇ ದಿವಸ ಟ್ರಾನ್ಸ್‌ಫರ್ ಆಗಿದೆ ಈಗ ಅವರು ಚಿಕ್ಕಮಗಳೂರಿಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ಆದರೆ ಮಂತ್ರಿಗಳಿಗೆ ಈ ಎರಡು